ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 30/06/2008 ರ ನಡವಳಿಗಳು

ವಿಷಯದ ಸಂಖ್ಯೆ:267/08-09

Construction of Size Stone Masonary Storm Water Drain from Ch.715 M to 1680 M and Construction of RCC Culvert in C-204 Secondary Storm Water Drain inside MEG and Center under Challaghatta Valley Package-1 ರ ಕಾಮಗಾರಿ ಬಗ್ಗೆ.

ಪ್ರಸ್ತಾವನೆ:

ಚಲ್ಲಘಟ್ಟ ಕಣಿವೆ ಪ್ಯಾಕೇಜ್-1 ರ ಸಿ-204 ಸೆಕೆಂಡರಿ ನಾಲೆ MEG and Center ನ ಒಳಭಾಗದಲ್ಲಿ ಬರುವ ಈ ನಾಲೆಗೆ 2007-08ನೇ ಸಾಲಿನ ದರಪಟ್ಟಿಯಂತೆ ಅಂದಾಜು ಪಟ್ಟಿಯನ್ನು ರೂ.311.40 ಲಕ್ಷಗಳಿಗೆ ತಯಾರಿಸಿದ್ದು, ಮಾನ್ಯ ಆಯುಕ್ತರವರು ಸದರಿ ಕಾಮಗಾರಿಗೆ ಸರ್ಕಾರದ ಮಂಜೂರಾತಿಯನ್ನು ನಿರೀಕ್ಷಿಸಿ ಟೆಂಡರ್ ಕರೆಯಲು ಅನುಮೋದಿಸಿರುವುದರಿಂದ ಅಂದಾಜುಪಟ್ಟಿಗೆ, ಕಾಮಗಾರಿ ಸಂಕೇತ, ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ನಿರೀಕ್ಷಿಸಿ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿತ್ತು, ಟೆಂಡರನ್ನು ಸಲ್ಲಿಸುವ ದಿನಾಂಕದಂದು ಗುತ್ತಿಗೆದಾರರು ಟೆಂಡರ್‌ನಲ್ಲಿ ಮುಕ್ತವಾಗಿ ಭಾಗವಹಿಸಲು ಸಾಧ್ಯವಾಗಿಲ್ಲವೆಂಬ ಅಂಶವನ್ನು ಗಮನಿಸಿ ವಿಶೇಷ ಆಯುಕ್ತರೊಂದಿಗೆ ಹಾಗೂ ಅಧೀಕ್ಷಕ ಅಭಿಯಂತರರೊಂದಿಗೆ ಚರ್ಚಿಸಿ ಸದರಿ ಟೆಂಡರ್ ಅನ್ನು ವಿಶೇಷ ಆಯುಕ್ತರು (ಯೋಜನೆ) ರವರಿಂದ ಅನುಮೋದನೆ ಪಡೆದು ರದ್ದುಗೊಳಿಸಿ, ಮರು ಟೆಂಡರ್ ಅನ್ನು ದಿನಾಂಕ:13/03/2008 ರಂದು ಕರೆಯಲಾಯಿತು.

ಸದರಿ ಕಾಮಗಾರಿಯ ಟೆಂಡರ್‌ನಲ್ಲಿ 8 ಜನ ಗುತ್ತಿಗೆದಾರರು ಭಾಗವಹಿಸಿದ್ದು, ತಾಂತ್ರಿಕ ಬಿಡ್‌ನಲ್ಲಿ ಶ್ರೀ.ವಿ.ಬಾಬುರಾವ್, ಮೆ:ಸಿದ್ದಾರ್ಥ ಸಿವಿಲ್ ವರ್ಕ್ಸ್ ಪ್ರೈ.ಲಿ., ಶ್ರೀ.ಜಿ.ಎಂ.ರವೀಂದ್ರ, ಶ್ರೀ.ಜಿ.ಜಯರಾಮ್ ಮತ್ತು ಮೆ:ಪಿ.ಜೆ.ಬಿ.ಇಂಜಿನಿಯರ್ಸ್ ಲಿ., ರವರು ಅರ್ಹರಾಗಿರುತ್ತಾರೆ. ಸದರಿಯವರ ಆರ್ಥಿಕ ಬಿಡ್ಡುಗಳನ್ನು ತೆರೆಯಲಾಗಿ, ವಿವರಗಳು ಈ ಕೆಳಕಂಡಂತೆ ಇರುತ್ತವೆ.

| ಕ್ರ.ಸಂ | ಗುತ್ತಿಗೆದಾರರ ಹೆಸರು | ಟೆಂಡರಿಗಿಟ್ಟರುವ ಮೊತ್ತ ರೂ.ಗಳಲ್ಲಿ | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ.ಗಳಲ್ಲಿ | ಟೆಂಡರ್ ಮೊತ್ತಕ್ಕೆ (2007-08ನೇ ಸಾಲಿನ ದರಪಟ್ಟಿ ಹೋಲಿಸಿದಾಗ | 2007-08ನೇ ಸಾಲಿನ ದರಪಟ್ಟಿ (ಪರಿಷ್ಕೃತ ಸಿಮೆಂಟ್ ಮತ್ತು ಉಕ್ಕಿನ ದರಗಳಿಗೆ) ಹೋಲಿಸಿ ತುಲನೆ ಮಾಡಿದಾಗ |
|---|---|---|---|---|---|
| 01 | ಶ್ರೀ.ವಿ.ಬಾಬುರಾವ್ | 3,10,58,228.73 | 2,91,27,632.00 | 6.22% below | 11.27% below |
| 02 | ಮೆ:ಸಿದ್ದಾರ್ಥ ಸಿವಿಲ್ ವರ್ಕ್ಸ್ ಪ್ರೈ.ಲಿ. | 3,10,58,228.73 | | 15.05% below | 19.63% below |
| 03 | ಶ್ರೀ.ಜಿ.ಎಂ.ರವೀಂದ್ರ | 3,10,58,228.73 | 2,63,86,529.01 | 15.04% below | 19.62% below |
| 04 | ಶ್ರೀ.ಜಿ.ಜಯರಾಮ್ | 3,10,58,228.73 | 2,59,73,053.00 | 16.37% below | 20.88% below |
| 05 | ಮೆ:ಪಿ.ಜೆ.ಬಿ.ಇಂಜಿನಿಯರ್ಸ್ ಲಿ., | 3,10,58,228.73 | 2,74,71,280.75 | 11.55% below | 16.31% below |

ಸದರಿ ಟೆಂಡರ್‌ನಲ್ಲಿ ಕನಿಷ್ಟ ಗುತ್ತಿಗೆದಾರರಾದ ಶ್ರೀ.ಜಿ.ಜಯರಾಮ್ ರವರು ರೂ.2,59,73,053.00 ಗಳನ್ನು ನಮೂದಿಸಿದ್ದು, ಟೆಂಡರ್ ಮೊತ್ತ ರೂ.3,10,58,228.73 ಗಳಿಗೆ (2007-08ನೇ ಸಾಲಿನ ದರ ಪಟ್ಟಿ) ಹೋಲಿಸಿ ತುಲನೆ ಮಾಡಿದಾಗ ಶೇಕಡ 16.37 ರಷ್ಟು ಕಡಿಮೆ ನಮೂದಿಸಿರುತ್ತಾರೆ. 2008-09ನೇ ಸಾಲಿನ ದರಪಟ್ಟಿಗೆ (ಪರಿಷ್ಕೃತ ಸಿಮೆಂಟ್ ಮತ್ತು ಉಕ್ಕಿನ ದರಗಳಿಗೆ) ಹೋಲಿಸಿ ತುಲನೆ ಮಾಡಿದಾಗ ಶೇಕಡ 20.88% ಕಡಿಮೆಯಾಗಿರುತ್ತದೆ.

. . . 2

ಈ ಹಿನ್ನೆಲೆಯಲ್ಲಿ ಸರ್ಕಾರದಿಂದ ಕೆಳಕಂಡಂತೆ ಆದೇಶ ಕೋರಿ ಮಂಡಿಸಿದೆ:-

1. ಕಾಮಗಾರಿಯ ಅಂದಾಜು ಮೊತ್ತ ರೂ.3,11,00,000/- ಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಈ ಕಾಮಗಾರಿಗೆ ತಗಲುವ ವೆಚ್ಚವನ್ನು ಈಗಾಗಲೇ ಜೆ.ಎನ್.ಎನ್.ಯು.ಆರ್.ಎಂ. ಅಡಿಯಲ್ಲಿ ಮಂಜೂರಾಗಿರುವ ಚಲ್ಲಘಟ್ಟ ಕಣಿವೆ ಪ್ಯಾಕೇಜ್ - 1 ರ ಬೃಹತ್ ಮಳೆ ನೀರು ಚರಂಡಿಯ ನವೀಕರಣ ಕಾಮಗಾರಿಯಲ್ಲಿ ಉಳಿತಾಯವಾಗುವ ಹಣದಿಂದ ಭರಿಸಲು ಕೋರಿದೆ.

2. ಈಗಾಗಲೇ ಮಂಜೂರಾತಿ ನಿರೀಕ್ಷಿಸಿ ಟೆಂಡರ್ ಆಹ್ವಾನಿಸಿರುವ ಕ್ರಮವನ್ನು ಸ್ಥಿರೀಕರಣಗೊಳಿಸಲು ಕೋರಿದೆ.

3. ಶ್ರೀ.ಜಿ.ಜಯರಾಮ್, ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ.2,59,73,053.00 ಗಳನ್ನು, ಟೆಂಡರ್ ಮೊತ್ತ ರೂ.3,10,58,228.73 ಗಳಿಗೆ (2007-08ನೇ ಸಾಲಿನ ದರ ಪಟ್ಟಿ) ಹೋಲಿಸಿ ತುಲನೆ ಮಾಡಿದಾಗ ಶೇಕಡ 16.37 ರಷ್ಟು ಕಡಿಮೆಯಾಗಿರುತ್ತದೆ. 2008-09ನೇ ಸಾಲಿನ ದರಪಟ್ಟಿಗೆ (ಪರಿಷ್ಕೃತ ಸಿಮೆಂಟ್ ಮತ್ತು ಉಕ್ಕಿನ ಸರಳುಗಳ ಪರಿಷ್ಕೃತ ದರಗಳಿಗೆ) ಹೋಲಿಸಿ ತುಲನೆ ಮಾಡಿದಾಗ ಶೇಕಡ 20.88% ಕಡಿಮೆಯಾಗಿರುವುದರಿಂದ ಸದರಿಯವರ ಟೆಂಡರ್‌ನ್ನು ಅನುಮೋದಿಸಲು ಕೋರಿದೆ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರು ದಿನಾಂಕ:18/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರು ದಿನಾಂಕ:18/06/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

ಸದರಿ ಕಿಯೋಸ್ಕ್‌ಗಳನ್ನು ನಿರ್ವಹಣೆ ಮಾಡಿ ಜಾಹೀರಾತುಗಳನ್ನು ಮಾಡಿಕೊಳ್ಳಲು ಹಾಗೂ ವಿದ್ಯುತ್ ಕಂಬಗಳಲ್ಲಿ ಅಳವಡಿಸಿರುವ ಕಿಯೋಸ್ಕ್‌ಗಳಲ್ಲಿ ಇರುವ ಎಲ್ಲಾ ಪರಿಕರಗಳೊಂದಿಗೆ ಪಾಲಿಕೆಗೆ ಹಸ್ತಾಂತರಿಸುವ ಷರತ್ತಿಗೊಳಪಟ್ಟು 01 ವರ್ಷದ ಅವಧಿಗೆ ಅನುಮತಿ ನೀಡಲು ಹಾಗೂ ನಂತರ 24 ತಿಂಗಳುಗಳಿಗೆ ಕರಾರು ಮಾಡಿಕೊಳ್ಳಲು ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:18/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:18/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:30/06/2008 ರ ನಡವಳಿಗಳು

ವಿಷಯದ ಸಂಖ್ಯೆ:269/08-09

ಹಳೇ ಕೇಂದ್ರ ಕಾರಾಗೃಹ ಆವರಣದಲ್ಲಿ "ಸ್ವಾತಂತ್ರ್ಯ ಉದ್ಯಾನವನ" ಅಭಿವೃದ್ಧಿ ಕಾಮಗಾರಿಯ ಮೊದಲನೇ ಹಂತದ ಕೆಲಸಗಳನ್ನು ಪೂರ್ಣಗೊಳಿಸಲು ಬೇಕಾದ ಹೆಚ್ಚುವರಿ ಕಾಮಗಾರಿಯ ಬಗ್ಗೆ.

ಪ್ರಸ್ತಾವನೆ:

ಹಳೇ ಕೇಂದ್ರ ಕಾರಾಗೃಹ ಆವರಣದಲ್ಲಿ "ಸ್ವಾತಂತ್ರ್ಯ ಉದ್ಯಾನವನ" ಅಭಿವೃದ್ಧಿ ಕಾಮಗಾರಿಯ ಮೊದಲನೇ ಹಂತದ ಕೆಲಸಗಳನ್ನು ಪೂರ್ಣಗೊಳಿಸಲು ಬೇಕಾದ ಹೆಚ್ಚುವರಿ ಕಾಮಗಾರಿಗೆ ಅಂದಾಜು ಪಟ್ಟಿಯನ್ನು 2003-04 ನೇ ಸಾಲಿನ ದರ ಪಟ್ಟಿ ಆಧಾರದ ಮೇಲೆ ರೂ.729.60 ಲಕ್ಷಗಳಿಗೆ ತಯಾರಿಸಿದ್ದು, ಸದರಿ ಯೋಜನೆಯ ಅಂದಾಜು ಮೊತ್ತ ರೂ.874.32 ಲಕ್ಷಗಳಿಗೆ ಅನುಮೋದನೆಯಾಗಿರುತ್ತದೆ. 2006-07ನೇ ಸಾಲಿನ ದರಪಟ್ಟಿಯ ಆಧಾರವನ್ನು ಅವಲೋಕಿಸಿ, ಪರಿಷ್ಕೃತ ಮೊತ್ತವಾದ ರೂ.1032 ಲಕ್ಷಗಳ ಟೆಂಡರ್ ಮೊತ್ತಕ್ಕೆ ಹೋಲಿಸಿದಾಗ ಶೇಕಡ.17.55 ಹೆಚ್ಚುವರಿಯಾಗಿರುತ್ತದೆ. ಗುತ್ತಿಗೆದಾರರೊಂದಿಗೆ ಮರು ಸಂಧಾನ ನಡೆಸಿದ ಮೇಲೆ ಗುತ್ತಿಗೆದಾರರು ರೂ.1027 ಲಕ್ಷಗಳಿಗೆ ಕಾಮಗಾರಿಯನ್ನು ನಿರ್ವಹಿಸಲು ಒಪ್ಪಿರುತ್ತಾರೆ. ಈ ಪರಿಷ್ಕೃತ ಅಂದಾಜಿಗೆ ಸರ್ಕಾರವು ಆದೇಶಸಂಖ್ಯೆ:ನಅಇ/506/ಎಂಎನ್‌ವೈ/2007, ದಿನಾಂಕ:12/11/2007 ರಲ್ಲಿ ಅನುಮೋದನೆ ನೀಡಿರುತ್ತದೆ.

ಮೊದಲನೇ ಹಂತದ ಕಾಮಗಾರಿಗಳು ಮುಗಿಯುವ ಹಂತದಲ್ಲಿರುತ್ತದೆ. ಮೇಲೆ ತಿಳಿಸಿದಂತೆ ಪರಿಷ್ಕೃತ ಮೊತ್ತಕ್ಕೆ ಅನುಮೋದನೆ ಪಡೆಯುವಲ್ಲಿ ಟೆಂಡರ್ ಮೊತ್ತವಾದ ರೂ.1027 ಲಕ್ಷಗಳಿಗೆ ಸೀಮಿತಗೊಳಿಸಿ ಹಲವಾರು ಕಾಮಗಾರಿಗಳನ್ನು ಕೈ ಬಿಡಲಾಗಿರುತ್ತದೆ. ಮೆ॥ ಮ್ಯಾಥ್ಯೂ ಅಂಡ್ ಘೋಷ್ ಸಲಹೆಗಾರರು ಕೆಳಕಂಡಂತೆ ಅಭಿಪ್ರಾಯ ನೀಡಿ, ರೂ.99.30 ಲಕ್ಷಗಳಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ.

1. ಮೊದಲನೇ ಹಂತದ ಕಾಮಗಾರಿಯ ಸಮಯದಲ್ಲಿ ಹಳೆಯದಾದ ಜೈಲ್ ಗೋಡೆ ಅಲ್ಲಲ್ಲಿ ಕುಸಿದಿದ್ದು ಈಗಾಗಲೇ ಮುಗಿಸಿರುವ ಕಾಮಗಾರಿಗಳನ್ನು ರಕ್ಷಿಸುವ ಸಲುವಾಗಿ ಇದರ ಜಾಗದಲ್ಲಿ ಅದೇ ರೀತಿಯಾದ ಗೋಡೆಯನ್ನು ನಿರ್ಮಿಸುವುದು.
2. ಸಮಾನಾಂತರ ಗೋಡೆಯ ತಳಪಾಯವು ಶಿಥಿಲವಾಗಿರುವುದರಿಂದ ಹಾಗೂ ಗೋಡೆಯ ಒಳ ಹಾಗೂ ಹೊರಭಾಗದಲ್ಲಿ ಮಣ್ಣಿನ ಮಟ್ಟ ವ್ಯತ್ಯಾಸವಿರುವುದರಿಂದ ಗೋಡೆಯು ಪಕ್ಕಕ್ಕೆ ಸರೆಯುವ ಸಾಧ್ಯತೆಯಿರುವುದರಿಂದ ಕಾಂಕ್ರೀಟ್ ತಡೆಗೋಡೆಯನ್ನು ನಿರ್ಮಿಸುವುದು.
3. ನೀರಿನ ಕೊಳ ಮತ್ತು ಕುಡಿಯುವ ನೀರಿನ ಚಿಲುಮೆಯನ್ನು ಸಾರ್ವಜನಿಕರ ಅನುಕೂಲಕ್ಕಾಗಿ ನಿರ್ಮಿಸುವುದು.
4. ಬ್ಯಾರಕ್ 'ಇ' ಮತ್ತು 'ಎಫ್' ನಲ್ಲಿ ನೆಲಹಾಸು ನಿರ್ಮಿಸುವುದು.
5. ಪರಿಷ್ಕೃತ ಟೆಂಡರ್‌ನಲ್ಲಿ ಉಕ್ಕಿನ ಪ್ರಮಾಣ ಕಡಿಮೆಯಿದ್ದು ಭಾಗಶಃ ಆಗಿರುವ ಕೆಲಸಗಳನ್ನು ಪೂರ್ಣಗೊಳಿಸುವ ಸಲುವಾಗಿ.
6. ಗಾಜಿನ ಸ್ಕೈಲೈಟ್‌ಗಳ ವಿನ್ಯಾಸಗಳನ್ನು ಸಲಹೆಗಾರರು ಬದಲಾಯಿಸಿರುವುದರಿಂದ ಅವುಗಳನ್ನು ನಿರ್ಮಿಸುವ ಸಲುವಾಗಿ.
7. ಪಾದಚಾರಿ ಮಾರ್ಗದ ಕಾಂಕ್ರೀಟ್ ಕರ್ಬ್ ಕಲ್ಲುಗಳು ಬದಲಾವಣೆಯಾದ ನಕ್ಷೆಯಿಂದಾಗಿ ಅಳವಡಿಸಲಾಗಿದೆ.

. . . . 2

8. ಹಳೆಯ ಗೋಡೆಗಳನ್ನು ನವೀಕರಣ ಮಾಡಿರುವುದರಿಂದ ಹೆಚ್ಚಾದ ಬಣ್ಣದ ಪರಿಮಾಣ ಹಾಗೂ ಪರಿಷ್ಕೃತ ಟೆಂಡರ್‌ನಲ್ಲಿ ಸೀಮಿತಗೊಳಿಸಿರುವುದರಿಂದ ಅಳವಡಿಸಲಾಗಿದೆ.
9. 20 ಎಮ್ ಎಮ್ ದಪ್ಪದ ಹೊಳಪಿನ ಗ್ರಾನೈಟ್ ನೆಲಹಾಸನ್ನು ಜನದಟ್ಟಣೆ ಇರುವ ಜಾಗದಲ್ಲಿ ಅಳವಡಿಸುವ ಸಲುವಾಗಿ.
10. ಜೈಲ್ ಮ್ಯೂಸಿಯಂನಲ್ಲಿ ಹಳೆಯದಾದ ಕಿಟಿಕಿ ಮತ್ತು ಬಾಗಿಲುಗಳ ಕವಾಟಗಳನ್ನು ತೆಗೆದು ಹೊಸದನ್ನು ಅಳವಡಿಸಲು ಮತ್ತು ಜೈಲಿಗೆ ಸಂಬಂಧಪಟ್ಟ ದಾಖಲೆಗಳನ್ನು ಇಡಲು ಅವಶ್ಯಕವಾಗಿರುತ್ತದೆ.
11. ವಿದ್ಯುತ್ ಕೇಬಲ್‌ಗಳನ್ನು ಡಿ.ಜಿ.ರೂಮಿನಿಂದ ಪಂಪ್ ಹೌಸಿನವರೆಗೆ ಅಳವಡಿಸುವುದು ಮತ್ತು ವಿದ್ಯುತ್ ಸಬ್ ಸ್ಟೇಷನ್ ಅನ್ನು ಚಾಲನೆ ಮಾಡುವ ಸಲುವಾಗಿ ಹಾಗೂ ಪರಿಷ್ಕೃತ ಅಂದಾಜಿನಲ್ಲಿ ಪರಿಮಾಣ ಇಲ್ಲದೇ ಇರುವ ಪ್ರಯುಕ್ತ ಸೇರಿಸಲಾಗಿದೆ.

ಈ ಹಿನ್ನಲೆಯಲ್ಲಿ ಹಳೆ ಕೇಂದ್ರ ಕಾರಗೃಹ ಆವರಣದಲ್ಲಿ ಸ್ವಾತಂತ್ರ್ಯ ಉದ್ಯಾನವನ ಅಭಿವೃದ್ಧಿ ಕಾಮಗಾರಿಯ ಮೊದಲನೇ ಹಂತದ ಕಾಮಗಾರಿಯನ್ನು ಪೂರ್ಣಗೊಳಿಸಲು ಬೇಕಾದ ಹೆಚ್ಚುವರಿ ಕಾಮಗಾರಿಯ ಅಂದಾಜು ಮೊತ್ತ ರೂ.99.30 ಲಕ್ಷಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:18/05/2008 ರ ಟಿಪ್ಪಣಿ.

<u>**ತೀರ್ಮಾನ:**</u> ಆಯುಕ್ತರವರ ದಿನಾಂಕ:18/05/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

8. ಹಳೆಯ ಗೋಡೆಗಳನ್ನು ನವೀಕರಣ ಮಾಡಿರುವುದರಿಂದ ಹೆಚ್ಚಾದ ಬಣ್ಣದ ಪರಿಮಾಣ ಹಾಗೂ ಪರಿಷ್ಕೃತ ಟೆಂಡರ್‌ನಲ್ಲಿ ಸೀಮಿತಗೊಳಿಸಿರುವುದರಿಂದ ಅಳವಡಿಸಲಾಗಿದೆ.
9. 20 ಎಮ್ ಎಮ್ ದಪ್ಪದ ಹೊಳಪಿನ ಗ್ರಾನೈಟ್ ನೆಲಹಾಸನ್ನು ಜನದಟ್ಟಣೆ ಇರುವ ಜಾಗದಲ್ಲಿ ಅಳವಡಿಸುವ ಸಲುವಾಗಿ.
10. ಜೈಲ್ ಮ್ಯೂಸಿಯಂನಲ್ಲಿ ಹಳೆಯದಾದ ಕಿಟಿಕಿ ಮತ್ತು ಬಾಗಿಲುಗಳ ಕವಾಟಗಳನ್ನು ತೆಗೆದು ಹೊಸದನ್ನು ಅಳವಡಿಸಲು ಮತ್ತು ಜೈಲಿಗೆ ಸಂಬಂಧಪಟ್ಟ ದಾಖಲೆಗಳನ್ನು ಇಡಲು ಅವಶ್ಯಕವಾಗಿರುತ್ತದೆ.
11. ವಿದ್ಯುತ್ ಕೇಬಲ್‌ಗಳನ್ನು ಡಿ.ಜಿ.ರೂಮಿನಿಂದ ಪಂಪ್ ಹೌಸಿನವರೆಗೆ ಅಳವಡಿಸುವುದು ಮತ್ತು ವಿದ್ಯುತ್ ಸಬ್ ಸ್ಟೇಷನ್ ಅನ್ನು ಚಾಲನೆ ಮಾಡುವ ಸಲುವಾಗಿ ಹಾಗೂ ಪರಿಷ್ಕೃತ ಅಂದಾಜಿನಲ್ಲಿ ಪರಿಮಾಣ ಇಲ್ಲದೇ ಇರುವ ಪ್ರಯುಕ್ತ ಸೇರಿಸಲಾಗಿದೆ.

ಈ ಹಿನ್ನಲೆಯಲ್ಲಿ ಹಳೆ ಕೇಂದ್ರ ಕಾರಗೃಹ ಆವರಣದಲ್ಲಿ ಸ್ವಾತಂತ್ರ್ಯ ಉದ್ಯಾನವನ ಅಭಿವೃದ್ಧಿ ಕಾಮಗಾರಿಯ ಮೊದಲನೇ ಹಂತದ ಕಾಮಗಾರಿಯನ್ನು ಪೂರ್ಣಗೊಳಿಸಲು ಬೇಕಾದ ಹೆಚ್ಚುವರಿ ಕಾಮಗಾರಿಯ ಅಂದಾಜು ಮೊತ್ತ ರೂ.99.30 ಲಕ್ಷಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:18/05/2008 ರ ಟಿಪ್ಪಣಿ.

<u>**ತೀರ್ಮಾನ:**</u> ಆಯುಕ್ತರವರ ದಿನಾಂಕ:18/05/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:30-06-2008 ರ ನಡವಳಿಗಳು**

**ವಿಷಯದ ಸಂಖ್ಯೆ:270/08-09**

ವಾರ್ಡ್ 77 ರ ನಗರ ಪಾಲಿಕೆ ಪ್ರಧಾನ ಕಛೇರಿ ಹಿಂಭಾಗದಲ್ಲಿ 20X20.6 ಅಡಿಗಳ ಅಳತೆಯ ಎ.ಸಿ.ಶೀಟಿನ ಕಟ್ಟಡವನ್ನು ಉಪಹಾರ ಗೃಹವನ್ನಾಗಿ ನಡೆಸಲು ಶ್ರೀ.ಲಿಂಗರಾಜು ರವರಿಗೆ ಗುತ್ತಿಗೆ ಆಧಾರ ನೀಡಲಾಗಿದ್ದು, ಗುತ್ತಿಗೆ ಅವಧಿಯನ್ನು ನವೀಕರಿಸುವ ಬಗ್ಗೆ.

**ಪ್ರಸ್ತಾವನೆ:**

ವಾರ್ಡ್ 77 ರ ನಗರ ಪಾಲಿಕೆ ಪ್ರಧಾನ ಕಛೇರಿ ಹಿಂಭಾಗದಲ್ಲಿ 20X20.6 ಅಡಿಗಳ ಅಳತೆಯ ಎ.ಸಿ.ಶೀಟಿನ ಕಟ್ಟಡವನ್ನು ಉಪಹಾರ ಗೃಹವನ್ನಾಗಿ ನಡೆಸಲು ಶ್ರೀ.ಲಿಂಗರಾಜು ರವರಿಗೆ ನೀರಿನ ಬಾಬ್ತು ತಿಂಗಳಿಗೆ ರೂ.500/- ಹಾಗೂ ಕಟ್ಟಡದ ಗುತ್ತಿಗೆ ತಿಂಗಳಿಗೆ ರೂ.1500/- ರಂತೆ ಒಟ್ಟು ಮಾಸಿಕ ರೂ.2,000/- ಗಳ ಆಧಾರದ ಮೇರೆಗೆ ದಿನಾಂಕ:31/03/2004 ರಿಂದ 3 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿರುತ್ತದೆ. ಸದರಿ ಗುತ್ತಿಗೆ ಅವಧಿಯು ದಿನಾಂಕ:30/03/2007 ಕ್ಕೆ ಮುಕ್ತಾಯಗೊಂಡಿರುತ್ತದೆ. ಅರ್ಜಿದಾರರು ಗುತ್ತಿಗೆ ಹಣವನ್ನು ಪೂರ್ತಿ ಪಾವತಿ ಮಾಡಿರುತ್ತಾರೆ.

ಅರ್ಜಿದಾರರು ಮನವಿ ಸಲ್ಲಿಸಿ ಸದರಿ ಜಾಗದ ಗುತ್ತಿಗೆ ಅವಧಿಯನ್ನು ದಿನಾಂಕ:30/03/2007 ರಿಂದ ಮುಂದಿನ ಮೂರು ವರ್ಷಗಳ ಅವಧಿಗೆ ನವೀಕರಿಸಲು ಕೋರಿರುತ್ತಾರೆ. ಈ ಬಗ್ಗೆ ಪರಿಶೀಲಿಸಲಾಗಿ, ಅರ್ಜಿದಾರರು ರಿಯಾಯಿತಿ ದರದಲ್ಲಿ ತಿಂಡಿ ತಿನಿಸುಗಳನ್ನು ನಗರ ಪಾಲಿಕೆಯ ನೌಕರರಿಗೆ ಸರಬರಾಜು ಮಾಡುತ್ತಿರುವುದರಿಂದ ಗುತ್ತಿಗೆ ಅವಧಿಯನ್ನು ನವೀಕರಿಸಬಹುದಾಗಿರುತ್ತದೆ ಹಾಗೂ ಸದರಿ ಕಟ್ಟಡದ ವಿದ್ಯುತ್ ಬಿಲ್ಲನ್ನು ನಗರ ಪಾಲಿಕೆವತಿಯಿಂದಲೇ ಪಾವತಿಸುತ್ತಿರುವುದು ಕಂಡು ಬರುತ್ತದೆ.

ಈ ಬಗ್ಗೆ ಮಾನ್ಯ ವಿಶೇಷ ಆಯುಕ್ತರು (ಆಡಳಿತ) ಹಾಗೂ ಜಂಟಿ ಆಯುಕ್ತರು (ಕಲ್ಯಾಣ/ಆಸ್ತಿಗಳು) ರವರು ಜಂಟಿಯಾಗಿ ಸ್ಥಳ ಪರಿಶೀಲನೆ ಮಾಡಿ, ಸದರಿ ಕಟ್ಟಡದ ಮಾಸಿಕ ಗುತ್ತಿಗೆ ಹಣವನ್ನು ರೂ.5,000/- ಗಳಿಗೆ ನಿಗಧಿಪಡಿಸಿ ಗುತ್ತಿಗೆ ಅವಧಿಯನ್ನು ಮುಂದಿನ ಮೂರು ವರ್ಷಗಳ ಅವಧಿಗೆ ನವೀಕರಿಸಲು ಅಭಿಪ್ರಾಯಪಟ್ಟಿರುತ್ತಾರೆ.

ಆದ್ದರಿಂದ, ಶ್ರೀ.ಲಿಂಗರಾಜುರವರಿಗೆ ಸದರಿ ಜಾಗದ ಗುತ್ತಿಗೆ ಅವಧಿಯನ್ನು ದಿನಾಂಕ:01/04/2007 ರಿಂದ ಮುಂದಿನ ಮೂರು ವರ್ಷಗಳ ಅವಧಿಗೆ ನವೀಕರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:19/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:19/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು.